2017 ಕ.ತೀ.ವ 599

ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಸುಭ್ರೊ ಕಮಲ್ ಮುಖರ್ಜಿ
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬೂದಿಹಾಳ್ ಆರ್.ಬಿ.

ಕರ್ನಾಟಕ ಬ್ಯಾಂಕ್ ಲಿ., ಬೆಂಗಳೂರು –ವಿರುದ್ಧ– ಶ್ರೀ ಎಂ. ಸುರೇಶ್*

ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮ, 1961ರ 4ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ರಿಟ್ ಅಪೀಲು.

ವಿಳಂಬವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದ ಅರ್ಜಿಗೆ ಅನುಬಂಧಿಸಲಾದ ಅಫಿಡಾವಿಟ್ಟಿನಲ್ಲಿ ಒಳಗೊಂಡ ದೃಢೋಕ್ತಿಗಳನ್ನು ಪರಿಗಣಿಸಿ, ಸಕಾಲದಲ್ಲಿ ರಿಟ್ ಅಪೀಲಿನ ವಿವರಣ ಪತ್ರವನ್ನು ಹಾಜರುಪಡಿಸುವುದರಿಂದ ಸೂಕ್ತ ಕಾರಣದ ಮೂಲಕ ಅಪೀಲುದಾರನನ್ನು ತಡೆಯಾಗಿರುತ್ತದೆಂಬುದರ ಬಗ್ಗೆ ನಮಗೆ ಮನವರಿಕೆಯಾಗಿರುತ್ತದೆ. ಆದ್ದರಿಂದ ರಿಟ್ ಅಪೀಲನ್ನು ಸಲ್ಲಿಸುವಲ್ಲಿನ ವಿಳಂಬವನ್ನು ಮನ್ನಾ ಮಾಡಲಾಗಿದೆ. ಪ್ರತ್ಯರ್ಜಿದಾರ – ರಿಟ್ ಅರ್ಜಿದಾರರು, ಅರ್ಜಿದಾರ ಕರ್ನಾಟಕ ಬ್ಯಾಂಕ್ ಲಿ. ಅನುಸೂಚಿತ ಬ್ಯಾಂಕ್‌ನ ಉದ್ಯೋಗಿಯಾಗಿರುತ್ತಾರೆ. ಪ್ರತ್ಯರ್ಜಿದಾರರು ತಮ್ಮ ಮನೆಯ ನಿರ್ಮಾಣಕ್ಕಾಗಿ ಅಪೀಲುದಾರ – ಬ್ಯಾಂಕಿನಿಂದ ಸಾಲಗಳನ್ನು ಪಡೆದಿರುತ್ತಾರೆ. ಅವರ ಹೆಸರಿನಲ್ಲಿ ಎರಡು ಅವಧಿಯ ಸಾಲಗಳನ್ನು ಮಂಜೂರು ಮಾಡಿದ್ದು, ಇವರು ನಿರಂತರವಾಗಿ ಸಾಲದ ಕಂತುಗಳನ್ನು ಸಂದಾಯ ಮಾಡುತ್ತಿರುತ್ತಾರೆ.

ಪ್ರತ್ಯರ್ಜಿದಾರ – ಉದ್ಯೋಗಿಯ ವಿರುದ್ಧ ದುರ್ನಡತೆಯ ಕೆಲವು ಆಪಾದನೆಗಳಿವೆ. ಶಿಸ್ತು ನಡಾವಳಿಯನ್ನು ಆರಂಭಿಸಿದ್ದು ಇದು ಇವರನ್ನು ಸೇವೆಯಿಂದ ವಜಾಗೊಳಿಸುವಂಥ ಪರಿಣಾಮಕ್ಕೆ ಕಾರಣವಾಗಿರುತ್ತದೆ. ಸೇವೆಯಿಂದ ವಜಾಗೊಳಿಸಿದ ತರುವಾಯ, ಸಾಲದ ಕಂತುಗಳನ್ನು ಸಂದಾಯ ಮಾಡಲು ಇವರಿಗೆ ಸಾಧ್ಯವಾಗಿರುವುದಿಲ್ಲ.

*ರಿಟ್ ಅಪೀಲು ಸಂಖ್ಯೆ: 3394/2016 (ಜಿಎಂ–ಆರ್‌ಇಎಸ್), ದಿನಾಂಕ: 21ನೇ ನವೆಂಬರ್, 2016.

ಹಣಕಾಸು ಆಸ್ತಿಗಳ ಭದ್ರತೀಕರಣ ಹಾಗೂ ಪುನರ್ ರಚನಾ ಹಾಗೂ ಭದ್ರತಾ ಹಿತಾಸಕ್ತಿ ಅಧಿನಿಯಮ, 2002 (ಸಂಕ್ಷಿಪ್ತವಾಗಿ ಅಧಿನಿಯಮ ಎಂದು ಕರೆಯಲಾಗಿರುತ್ತದೆ) ರಡಿಯಲ್ಲಿನ ನಡಾವಳಿಗಳನ್ನು ಆರಂಭಿಸಲಾಗಿರುತ್ತದೆ. ಸ್ವಾಧೀನಪಡಿಸಿಕೊಳ್ಳುವ ನೋಟೀಸಿನ ಸಾರಾಂಶವನ್ನು 2010ರ ನವೆಂಬರ್ 2 ರಂದು ಅಧಿನಿಯಮದ 13ನೇ ಪ್ರಕರಣದ (4) ಉಪ–ಪ್ರಕರಣದಡಿಯಲ್ಲಿ ನೀಡಲಾಗಿರುತ್ತದೆ. ಆ ತರುವಾಯ, ಬ್ಯಾಂಕು ಪ್ರಶ್ನಿತ ಸ್ವತ್ತನ್ನು ಸ್ವಾಧೀನಪಡಿಸಿಕೊಂಡಿರುತ್ತದೆ.

ಬ್ಯಾಂಕು, ವಾಣಿಜ್ಯ ವ್ಯವಸ್ಥೆಯಲ್ಲಿ, ಬ್ಯಾಂಕಿನ ವ್ಯವಹಾರದ ಸಾಮಾನ್ಯ ಪ್ರಕ್ರಿಯೆಯಲ್ಲಿ, ತನ್ನ ಗ್ರಾಹಕರು ಅಥವಾ ತನ್ನ ಗ್ರಾಹಕರ ಪರವಾಗಿ ಠೇವಣಿ ಮಾಡುವ ಎಲ್ಲಾ ನಮೂನೆಯ ಭದ್ರತೆಗಳ ಅಥವಾ ವರ್ಗಾವಣೀಯ ಲಿಖಿತಗಳ ಮೇಲೆ ಸಾಮಾನ್ಯ ಧಾರಣಾಧಿಕಾರನನ್ನು ಹೊಂದಿರುತ್ತದೆಂಬುದು ಇತ್ಯರ್ಥಗೊಂಡ ಕಾನೂನಾಗಿರುತ್ತದೆ.

ಆದ್ದರಿಂದ, ಈ ಅಪೀಲನ್ನು ಅಂಗೀಕರಿಸಲಾಗಿರುತ್ತದೆ. ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ. ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರ ಎಲ್ಲಾ ಅಭಿಪ್ರಾಯಗಳನ್ನು ತಳ್ಳಿಹಾಕಲಾಗಿದೆ. ಪಕ್ಷಕಾರರಿಗೆ ಅವರ ವಿವಾದಗಳನ್ನು ಪರಿಹರಿಸಿಕೊಳ್ಳಲು ಸಿವಿಲ್ ನ್ಯಾಯಾಲಯದ ನೆರವು ಪಡೆಯಲು ಅವರು ಮುಕ್ತರಾಗಿರತಕ್ಕದ್ದು ಎಂದು ಅಭಿಪ್ರಾಯಪಟ್ಟಿದೆ.

ಅರ್ಜಿದಾರರ ಪರ : ಶ್ರೀ ವೈ. ವಿ. ಪಾರ್ಥಸಾರಥಿ, ವಕೀಲರು.
ಪ್ರತ್ಯರ್ಜಿದಾರರ ಪರ : ಶ್ರೀ ಎಂ. ಶ್ರೀಕಾಂತ್, ವಕೀಲರು.

## ಐ.ಎ. I/2016 ಕುರಿತ ಆದೇಶ

**ಮುಖ್ಯ ನ್ಯಾಯಮೂರ್ತಿ ಶ್ರೀ ಸುಭ್ರೋ ಕಮಲ್ ಮುಖರ್ಜಿ:**

ಈ ಅಪೀಲನ್ನು ಸಲ್ಲಿಸುವಲ್ಲಿ 239ದಿನಗಳ ವಿಳಂಬವಾಗಿರುತ್ತದೆ.

ವಿಳಂಬವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದ ಅರ್ಜಿಯೊಂದಿಗೆ ಹಾಜರಾದ ಮಾನ್ಯ ನ್ಯಾಯವಾದಿಗಳಾದ ಶ್ರೀಯುತ ವೈ.ವಿ. ಪಾರ್ಥಸಾರಥಿಯವರ ವಾದವನ್ನು ಆಲಿಸಿದ ತರುವಾಯ ಹಾಗೂ ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀಯುತ ಎಂ. ಶ್ರೀಕಾಂತ್ ರವರ ವಾದವನ್ನು ಆಲಿಸಿದ ತರುವಾಯ, ವಿಳಂಬವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದ ಅರ್ಜಿಗೆ ಅನುಬಂಧಿಸಲಾದ ಅಫಿಡಾವಿಟ್ಟಿನಲ್ಲಿ ಒಳಗೊಂಡ ದೃಢೋಕ್ತಿಗಳನ್ನು ಪರಿಗಣಿಸಿ, ಸಕಾಲದಲ್ಲಿ ರಿಟ್ ಅಪೀಲಿನ ವಿವರಣ ಪತ್ರವನ್ನು ಹಾಜರುಪಡಿಸುವುದರಿಂದ ಸೂಕ್ತ ಕಾರಣದ ಮೂಲಕ ಅಪೀಲುದಾರನನ್ನು ತಡೆಯಾಗಿರುತ್ತದೆಂಬುದರ ಬಗ್ಗೆ ನಮಗೆ ಮನವರಿಕೆಯಾಗಿರುತ್ತದೆ. ಆದ್ದರಿಂದ ರಿಟ್ ಅಪೀಲನ್ನು ಸಲ್ಲಿಸುವಲ್ಲಿನ ವಿಳಂಬವನ್ನು ಮನ್ನಾ ಮಾಡಲಾಗಿದೆ.

ವಿಳಂಬವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದ ಅರ್ಜಿಯನ್ನು ಅಂಗೀಕರಿಸಲಾಗಿರುತ್ತದೆ.

ವೆಚ್ಚಗಳಿಗೆ ಸಂಬಂಧಿಸಿದಂತೆ ನಾವು ಯಾವುದೇ ಆದೇಶವನ್ನು ಮಾಡಿರುವುದಿಲ್ಲ.

ಪಕ್ಷಕಾರರ ಸಮ್ಮತಿಯೊಂದಿಗೆ, ರಿಟ್ ಅಪೀಲನ್ನು ಪ್ರಾಥಮಿಕ ಸುನಾವಣೆಗಾಗಿ ಕೈಗೆತ್ತಿಕೊಳ್ಳಲಾಗಿದೆ.

## ರಿಟ್ ಅಪೀಲಿನಲ್ಲಿನ ತೀರ್ಪು

2. ಪ್ರತ್ಯರ್ಜಿದಾರ – ರಿಟ್ ಅರ್ಜಿದಾರರು, ಅರ್ಜಿದಾರ ಕರ್ನಾಟಕ ಬ್ಯಾಂಕ್ ಲಿ. ಅನುಸೂಚಿತ ಬ್ಯಾಂಕ್‌ನ ಉದ್ಯೋಗಿಯಾಗಿರುತ್ತಾರೆ. ಪ್ರತ್ಯರ್ಜಿದಾರರು ತಮ್ಮ ಮನೆಯ ನಿರ್ಮಾಣಕ್ಕಾಗಿ ಅಪೀಲುದಾರ–ಬ್ಯಾಂಕಿನಿಂದ ಸಾಲಗಳನ್ನು ಪಡೆದಿರುತ್ತಾರೆ. ಅವರ ಹೆಸರಿನಲ್ಲಿ ಎರಡು ಅವಧಿಯ ಸಾಲಗಳನ್ನು ಮಂಜೂರು ಮಾಡಿದ್ದು, ಇವರು ನಿರಂತರವಾಗಿ ಸಾಲದ ಕಂತುಗಳನ್ನು ಸಂದಾಯ ಮಾಡುತ್ತಿರುತ್ತಾರೆ.

3. ಪ್ರತ್ಯರ್ಜಿದಾರ – ಉದ್ಯೋಗಿಯ ವಿರುದ್ಧ ದುರ್ನಡತೆಯ ಕೆಲವು ಆಪಾದನೆಗಳಿವೆ. ಶಿಸ್ತು ನಡಾವಳಿಯನ್ನು ಆರಂಭಿಸಿದ್ದು ಇದು ಇವರನ್ನು ಸೇವೆಯಿಂದ ವಜಾಗೊಳಿಸುವಂಥ ಪರಿಣಾಮಕ್ಕೆ ಕಾರಣವಾಗಿರುತ್ತದೆ. ಸೇವೆಯಿಂದ ವಜಾಗೊಳಿಸಿದ ತರುವಾಯ, ಸಾಲದ ಕಂತುಗಳನ್ನು ಸಂದಾಯ ಮಾಡಲು ಇವರಿಗೆ ಸಾಧ್ಯವಾಗಿರುವುದಿಲ್ಲ.

4. ಹಣಕಾಸು ಆಸ್ತಿಗಳ ಭದ್ರತೀಕರಣ ಹಾಗೂ ಪುನರ್ ರಚನಾ ಹಾಗೂ ಭದ್ರತಾ ಹಿತಾಸಕ್ತಿ ಅಧಿನಿಯಮ, 2002 (ಸಂಕ್ಷಿಪ್ತವಾಗಿ ಅಧಿನಿಯಮ ಎಂದು ಕರೆಯಲಾಗಿರುತ್ತದೆ) ರಡಿಯಲ್ಲಿನ ನಡಾವಳಿಗಳನ್ನು ಆರಂಭಿಸಲಾಗಿರುತ್ತದೆ. ಸ್ವಾಧೀನಪಡಿಸಿಕೊಳ್ಳುವ ನೋಟೀಸಿನ ಸಾರಾಂಶವನ್ನು 2010ರ ನವೆಂಬರ್ 2 ರಂದು ಅಧಿನಿಯಮದ 13ನೇ ಪ್ರಕರಣದ (4) ಉಪ–ಪ್ರಕರಣದಡಿಯಲ್ಲಿ ನೀಡಲಾಗಿರುತ್ತದೆ. ಆ ತರುವಾಯ, ಬ್ಯಾಂಕು ಪ್ರಶ್ನಿತ ಸ್ವತ್ತನ್ನು ಸ್ವಾಧೀನಪಡಿಸಿಕೊಂಡಿರುತ್ತದೆ.

5. ರಿಟ್ ಅರ್ಜಿಯನ್ನು ಈ ನ್ಯಾಯಾಲಯದ ಮುಂದೆ ಬ್ಯಾಂಕಿನ ವಿರುದ್ಧ ಸಲ್ಲಿಸಲಾಗಿರುತ್ತದೆ. ರಿಟ್ ಅರ್ಜಿಯು ಇತ್ಯರ್ಥದಲ್ಲಿರುವ ಅವಧಿಯಲ್ಲಿ, ಪ್ರತ್ಯರ್ಜಿದಾರ – ರಿಟ್ ಅರ್ಜಿದಾರರು ಹಣವನ್ನು ಒಟ್ಟುಗೂಡಿಸಿ, ಬ್ಯಾಂಕಿಗೆ ಕೊಡಬೇಕಾಗಿದ್ದ ಒಟ್ಟಾರೆ ಬಾಕಿ ಮೊತ್ತದ ಸಂಪೂರ್ಣ ಸಾಲವನ್ನು ಮರುಪಾವತಿ ಮಾಡಿರುತ್ತಾರೆ. ಸಾಲದ ಲೆಕ್ಕಖಾತೆಯು ಮುಕ್ತಾಯವಾದ ತರುವಾಯ, ಪ್ರತ್ಯರ್ಜಿದಾರ ರಿಟ್ ಅರ್ಜಿದಾರರು ಬ್ಯಾಂಕ್‌ನಿಂದ ಸ್ವಾಮ್ಯದ ಮೂಲ ದಾಖಲೆಗಳನ್ನು ಹಿಂತಿರುಗಿಸುವಂತೆ ಕೋರಿರುತ್ತಾರೆ. ಬ್ಯಾಂಕು, ಭಾರತೀಯ ಕರಾರು ಅಧಿನಿಯಮ, 1872ರ 171ನೇ ಪ್ರಕರಣದಡಿಯಲ್ಲಿ ಉಲ್ಲೇಖಿಸಿರುವ ತನ್ನ ಹಕ್ಕುಗಳನ್ನು ಚಲಾಯಿಸಿ ಸದರಿ ದಸ್ತಾವೇಜುಗಳನ್ನು ಹಿಂದಿರುಗಿಸಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

6. ಆದಾಗ್ಯೂ, ಮಾನ್ಯ ಏಕ ಸದಸ್ಯಪೀಠದ ನ್ಯಾಯಾಧೀಶರು, ಪ್ರತ್ಯರ್ಜಿದಾರ – ರಿಟ್ ಅರ್ಜಿದಾರರ ಹೆಸರಿನಲ್ಲಿ ಯಾವುದೇ ಅಹವಾಲು ಸಲ್ಲಿಸಲು ಅವಕಾಶ

ಮಾಡಿಕೊಟ್ಟಿರುವುದಿಲ್ಲ. ಆದರೆ ರಿಟ್ ಅರ್ಜಿದಾರರು ಸಿವಿಲ್ ದಾವೆಯನ್ನು ಸಲ್ಲಿಸುವುದು ಯುಕ್ತವಾದುದೆಂದು ಅಭಿಪ್ರಾಯಪಟ್ಟಿರುತ್ತಾರೆ. ರಿಟ್ ಅರ್ಜಿಯಲ್ಲಿ ಬ್ಯಾಂಕಿನ ಪರ ಹಾಜರಾದ ಮಾನ್ಯ ವಕೀಲರು ಸಲ್ಲಿಸಿದ ನಿವೇದನೆಗಳನ್ನು ಕುರಿತಂತೆ ಕೂಡ ಸಿವಿಲ್ ನ್ಯಾಯಾಲಯು ಡಿಕ್ರಿಯನ್ನು ಹೊರಡಿಸಬಹುದೆಂದೂ ಅಭಿಪ್ರಾಯಪಟ್ಟಿರುತ್ತಾರೆ.

7. ಅನುಸೂಚಿತ ಬ್ಯಾಂಕಿನ ವಿರುದ್ಧದ ರಿಟ್ ಅರ್ಜಿಯೇ ಊರ್ಜಿತ ವಾಗುವುದಿಲ್ಲವಾದ್ದರಿಂದ ಇಂಥ ಅಭಿಪ್ರಾಯಗಳು ಅನಾವಶ್ಯಕವಾದವುಗಳಾಗಿವೆ. ಭಾರತ ಸಂವಿಧಾನದ 12ನೇ ಅನುಚ್ಛೇದದ ಅರ್ಥ ವ್ಯಾಪ್ತಿಯೊಳಗೆ ಕರ್ನಾಟಕ ಬ್ಯಾಂಕ್ ಲಿ. ಸಮುಚಿತ ಪ್ರಾಧಿಕಾರವಾಗಿರುವುದಿಲ್ಲ. ಇದರಿಂದ ರಿಟ್ ಅರ್ಜಿಯು, ಊರ್ಜಿತವಾಗುವುದಿಲ್ಲ.

8. ಇದೂ ಅಲ್ಲದೆ, ಅನುಸೂಚಿತ ಬ್ಯಾಂಕು ಹಾಗೂ ಇದರ ಉದ್ಯೋಗಿಯ ನಡುವಿನ ವಿವಾದವು, ಕಾನೂನಿಗನುಸಾರವಾಗಿ ಯುಕ್ತ ವೇದಿಕೆಯ ಮುಂದೆ ಪರಿಗಣಿಸಬೇಕಾದಂಥ ವಿಷಯವಾಗಿರುತ್ತದೆ. ರಿಟ್ ಅರ್ಜಿದಾರರು ಸಿವಿಲ್ ದಾವೆಯನ್ನು ಸಲ್ಲಿಸಿದಲ್ಲಿ ವಾದಿ ರಿಟ್ ಅರ್ಜಿದಾರನು ಬ್ಯಾಂಕ್ ಪರ ಹಾಜರಾದ ಮಾನ್ಯ ವಕೀಲರು ನ್ಯಾಯಾಲಯದ ಎದುರು ಸಲ್ಲಿಸಿದ ನಿವೇದನೆಗಳನ್ನು ಕುರಿತಂತೆ ಕೂಡ ಡಿಕ್ರಿಗೆ ಹಕ್ಕುಳ್ಳವರಾಗಿರುತ್ತಾರೆಂದು ಮಾನ್ಯ ಏಕ ಸದಸ್ಯ ನ್ಯಾಯಪೀಠದ ನ್ಯಾಯಾಧೀಶರು ನೀಡಿರುವ ತೀರ್ಪು ಸರಿಯಾದುದಾಗಿರುವುದಿಲ್ಲ.

9. ಬ್ಯಾಂಕು, ವಾಣಿಜ್ಯ ವ್ಯವಸ್ಥೆಯಲ್ಲಿ, ಬ್ಯಾಂಕಿನ ವ್ಯವಹಾರದ ಸಾಮಾನ್ಯ ಪ್ರಕ್ರಿಯೆಯಲ್ಲಿ, ತನ್ನ ಗ್ರಾಹಕರು ಅಥವಾ ತನ್ನ ಗ್ರಾಹಕರ ಪರವಾಗಿ ಠೇವಣಿ ಮಾಡುವ ಎಲ್ಲಾ ನಮೂನೆಯ ಭದ್ರತೆಗಳ ಅಥವಾ ವರ್ಗಾವಣೀಯ ಲಿಖಿತಗಳ ಮೇಲೆ ಸಾಮಾನ್ಯ ಧಾರಣಾಧಿಕಾರನನ್ನು ಹೊಂದಿರುತ್ತದೆಂಬುದು ಇತ್ಯರ್ಥಗೊಂಡ ಕಾನೂನಾಗಿರುತ್ತದೆ.

10. ಆದ್ದರಿಂದ, ಈ ಅಪೀಲನ್ನು ಅಂಗೀಕರಿಸಲಾಗಿರುತ್ತದೆ. ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ. ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರ ಎಲ್ಲಾ ಅಭಿಪ್ರಾಯಗಳನ್ನು ತಳ್ಳಿಹಾಕಲಾಗಿದೆ. ಪಕ್ಷಕಾರರಿಗೆ ಅವರ ವಿವಾದಗಳನ್ನು ಪರಿಹರಿಸಿಕೊಳ್ಳಲು ಸಿವಿಲ್ ನ್ಯಾಯಾಲಯದ ನೆರವು ಪಡೆಯಲು ಅವರು ಮುಕ್ತರಾಗಿರತಕ್ಕದ್ದು. ಆದಾಗ್ಯೂ, ನಾವು, ವಿಷಯದ ಗುಣಾರ್ಹತೆಗಳ ಮೇಲೆ ಯಾವುದೇ ಅಭಿಪ್ರಾಯವನ್ನು ನೀಡಿರುವುದಿಲ್ಲ.

11. ವೆಚ್ಚಗಳಿಗೆ ಸಂಬಂಧಿಸಿದಂತೆ ನಾವು ಯಾವುದೇ ಆದೇಶವನ್ನು ನೀಡಿರುವುದಿಲ್ಲ.